ನೊಂದಾವಣೆಯಾಗುತ್ತದೊ ಗೊತ್ತಿಲ್ಲ. ಏಕೆಂದರೆ ಇಲ್ಲಿ ಡಿ.ಒ.ಟಿ. ಕೊಟ್ಟಿರುವುದು 15 ವರ್ಷಕ್ಕೆ. ಆದ್ದರಿಂದ ಇದು ಇನ್ನೂ ಎರಡು ಅಥವಾ ಮೂರು ಪಟ್ಟಾಗುತ್ತದೊ ನನಗೆ ಗೊತ್ತಿಲ್ಲ. ಇಲ್ಲಿ ನಾಲ್ಕು ಚಕ್ರದ ವಾಹನಕ್ಕೆ ಕನಿಷ್ಠ 750 ರೂಪಾಯಿ ಜಾಸ್ತಿಯಾದರೆ 30 ಲಕ್ಷ ವಾಹನಗಳಿಗೆ 250 ಕೋಟಿಯಾಗುತ್ತದೆ. ಹಾಗೆಯೇ ದ್ವಿಚಕ್ರ ವಾಹನದಲ್ಲಿ 200–250 ವ್ಯತ್ಯಾಸವಿದೆ. 35 ಲಕ್ಷ ವಾಹನಕ್ಕೆ 250 ರೂಪಾಯಿಯಂತೆ 100 ಕೋಟಿ ಯಾಗುತ್ತದೆ. ತ್ರಿಚಕ್ರವಾಹನದಲ್ಲಿ 350 ರೂಪಾಯಿ ಒಂದು ವಾಹನಕ್ಕೆ ವ್ಯತ್ಯಾಸವಿದೆ. 8 ಲಕ್ಷಕ್ಕೆ ಕನಿಷ್ಠ 300 ರೂಪಾಯಿಯಂತೆ 24 ಕೋಟಿ ಯಾಗುತ್ತದೆ. ಇವೆಲ್ಲಾ ಮಾಡಿಕೊಂಡು ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಲೆಕ್ಕಾ ಮಾಡಿ ಹಾಕಿದ್ದಾರೆ.

**ಶ್ರೀ ಆರ್.ಅಶೋಕ್** : ನೀವೂ ಕೊಟ್ಟಿದ್ದೀರಿ?

**ಶ್ರೀ ಹೆಚ್. ಡಿ. ರೇವಣ್ಣ** : ನೀವು ಮಾಡಿದ್ದೀರಿ ಎಂದು ನಾನು ಹೇಳುತ್ತಿಲ್ಲ.

**ಶ್ರೀ ಸಿದ್ದು ಸವದಿ** : ನೀವೂ ಮಾಡಿದ್ದೀರಿ ಎಂದು ಹತ್ತು ಸಲ ಹೇಳುತ್ತೇನೆ.

**ಶ್ರೀ ಹೆಚ್.ಡಿ. ರೇವಣ್ಣ** : ನಾನು ಮಾಡಿದ್ದೇನೆಂದೇ ದಾಖಲಾತಿ ಸಹಿತ ಹೇಳುತ್ತಿದ್ದೇನೆ. ತಾವು ಸ್ವಲ್ಪ ತಾಳ್ಮೆಯಿಂದ ಕುಳಿತುಕೊಳ್ಳಿ. ದಯಮಾಡಿ ಅದು ನಿಮಗೆ ಬರುವುದಿಲ್ಲ. ಮಂತ್ರಿಗಳು ಅದನ್ನು ಸಮರ್ಥಿಸಿಕೊಳ್ಳಬೇಕು.

**(ಗೊಂದಲ)**

**ಶ್ರೀ ರಮಾನಾಥ ರೈ** : ಮಾನ್ಯ ಸಚಿವರು ಅದಕ್ಕೆ ಉತ್ತರ ಕೊಡುತ್ತಾರೆ ಬಿಡಿ.

**ಶ್ರೀ ಹೆಚ್.ಡಿ.ರೇವಣ್ಣ** : ಇದರಲ್ಲಿ ಯಾರ ಕೈವಾಡವಿದೆ ಎಂಬುದು ಹೊರಕ್ಕೆ ಬರಬೇಕು. ಏಕೆಂದರೆ ಈ ಘಟನೆ ಯಾವಾಗ ಪ್ರಾರಂಭವಾಯಿತು, ಯಾವಾಗ ಅಂತ್ಯಗೊಂಡಿತು ಎಂಬುದು ಹೊರಕ್ಕೆ ಬಂದು ರಾಜ್ಯದ ಜನತೆಗೆ ಮೆಸೇಜ್ ಹೋಗಬೇಕು.

**ಅಧ್ಯಕ್ಷರು** : ರೇವಣ್ಣನವರೆ, ಮಧ್ಯಾಹ್ನ ತೆಗೆದುಕೊಳ್ಳೋಣ.

**ಶ್ರೀ ಹೆಚ್.ಡಿ. ರೇವಣ್ಣ** : ಆಗಲಿ.

**ಅಧ್ಯಕ್ಷರು** : ಈಗ ಒಂದು ಪ್ರಕಟಣೆ.